ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಕೆಲವರು ವೃಕ್ಷದ ಕೆಳಗೆ ಕುಳಿತು ತಪಸ್ಸು ಮಾಡಿದರೂ ಏಕೆ ಫಲ ದೊರೆಯುವುದಿಲ್ಲ?



ಅಲ್ಲಿ ಸುಳಿಯುವ ಅಂದದ ಹಕ್ಕಿಗಳು ಮನಸ್ಸನ್ನು ಚಂಚಲಗೊಳಿಸುತ್ತವಂತೆ.

ಎಂ.ಎಸ್. ಗುರುರಾಜ ಆಚಾರು, ಬಳ್ಳಾರಿ
ಸನ್ಯಾಸಿಗೆ ವಿನಯದ ಎರಡು ಕಣ್ಣು; ಪೊಲೀಸರಿಗೆ ಸಂಚಿನ 4 ಕಣ್ಣು. ಮಂತ್ರಿಗಳಿಗೆ?
ಸಬ್ಬಕ್ಕಿಪಾಯಸದಂತೆ ಮೈಯೆಲ್ಲಾ ಕಣ್ಣು!

ಟಿ.ಎಂ. ಮಾನಪ್ಪ, ಶಿವಮೊಗ್ಗ
ಹಾವನ್ನು ವಿಷಜಂತುವಾಗಿ ಏಕೆ ಸೃಷ್ಟಿಸಿದ?
ಇಲ್ಲದಿದ್ದರೆ ಹಾವಿನ ಮರಿಗಳ ಬಾಲ, ತಲೆಗೆ ಪಿನ್ ಬಡಿದು ಸರದಂತೆ ಬಳಸಿಬಿಡುತ್ತಾರೆಂದು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಗಡಿಬಿಡಿ ಗಂಡನಿಗೆ ಸಿಡಿಮಿಡಿ ಹೆಂಡತಿ ಸಿಕ್ಕಿದರೆ ಏನಾಗಬಹುದು?
ಸೆರಾಮಿಕ್‌ಗಳು ಪುಡಿಪುಡಿ, ಕಂಗಳಲ್ಲಿ ಕಿಡಿಕಿಡಿ.

ಅಮರಯ್ಯಾ ಪತ್ರಿಮಠ, ಸುರಪುರ
ನಮ್ಮ ಮನಸ್ಸು ಗುಲಾಬ್ ಜಾಮೂನಿನಂತೆ ಆಗಬೇಕಾದರೆ?



ಸಕ್ಕರೆಪಾಕದಂತಹ ಸಂಗಾತಿ ಇರಬೇಕು.

ಮೋಹನರಾಜು ಎಸ್.ಎ. ಶಂಕರಘಟ್ಟ
ಬಾಲೆ ಕಟ್ಟುವ ಮಾಲೆಗೂ, ವರ ವಧುವಿಗೆ ಕಟ್ಟುವ ಮಾಂಗಲ್ಯಕ್ಕೂ ಏನಾದರೂ ಸಂಬಂಧವಿದೆಯೆ?
'ದಾರ' ಎಂಬ ಪದವೇ; ದಾರವೆಂದರೆ ನೂಲು; ದಾರವೆಂದರೆ ಪತ್ನಿ.

ಉಷಾ ರಾಜರಾವ್, ಬೆಂಗಳೂರು
ರೆಸಲ್ಯೂಷನ್ ತೆಗೆದುಕೊಳ್ಳಲು ಹೊಸವರ್ಷವೇ ಆಗಬೇಕೆ? ಯಾವಾಗಲಾದರೂ ತೆಗೆದುಕೊಳ್ಳಬಹುದಲ್ಲವೆ?
'ಹೌದು' ಎಂದಿತು ನನ್ನ ಬಳಿಯಿರುವ ಹೈ ರೆಸಲ್ಯೂಷನ್ ಕ್ಯಾಮೆರಾ.

ಭಾರತೀ ಗಂಗಾಧರ್, ಬೆಂಗಳೂರು
ಹಳೇ ಗಂಡನ ಪಾದವೇ ಗತಿ ಅಂತಾರೆ. ಹಳೇ ಹೆಂಡತಿಯ ಪಾದವೇ ಗತಿ ಅನ್ನೋಲ್ಲವೇಕೆ?
ಗಂಡು 'ಹಳೇ' ಎನ್ನಿಸಿಕೊಳ್ಳಲು ಒಪ್ಪುವಂತೆ ಹೆಣ್ಣು ಒಪ್ಪಳಂತೆ.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ನಿಂತರೆ ನೀರು ಕೆಡತ್ತೆ, ಕುಂತರೆ ಮನುಷ್ಯ ಕೆಡುತ್ತಾನೆ ಅಲ್ವಾ ಸಾರ್?
ನೀರು ಹಿಮವಾಗಿ ನಿಂತರೆ ಕೆಡುವುದಿಲ್ಲ; ಮನುಷ್ಯ ಸೈಕಲ್ ತುಳಿಯುತ್ತಾ ಕುಂತರೆ ಕೆಡುವುದಿಲ್ಲ.

ಪಿ. ಜಯವಂತ ಪೈ, ಕುಂದಾಪುರ
ಪಾಕಿಸ್ತಾನದ ವ್ಯಕ್ತಿಯೊಬ್ಬ ಮೂರು ಮದುವೆಯಾಗಿದ್ದು ಅರವತ್ತು ಮಕ್ಕಳನ್ನು ಹೊಂದಿದ್ದಾನಂತಲ್ಲ?
ಹ್ಹ! ಧೃತರಾಷ್ಟ್ರ, ಸಗರನ ಮುಂದೆ ಅವನು ಫ್ರೀನರ್ಸರಿ ಬಚ್ಚಾ!

ಬಿ.ಎಂ. ಚಂದ್ರೇಗೌಡ, ಬೆಂಗಳೂರು
ಆರ್ಥಿಕ ಬಡತನಕ್ಕೂ, ವೈಚಾರಿಕ ಬಡತನಕ್ಕೂ ಏನು ವ್ಯತ್ಯಾಸ?
ಆರ್ಥಿಕ ಬಡವ ಉತ್ತಮನಾಗಬಯಸುತ್ತಾನೆ. ವೈಚಾರಿಕ ಬಡವ ಇದ್ದಲ್ಲೇ ಗಿರಕಿ ಹೊಡೆಯುತ್ತಿರುತ್ತಾನೆ.

ರಾಜಶೇಖರ ಹಾದಿಮನಿ, ಧಾರವಾಡ
ಬಾಯಲ್ಲಿ ಶಿವಸ್ತೋತ್ರ, ಮಾಡೋದು ಸ್ವಾರ್ಥದ ಕೆಲಸ. ಇವರಿಗೇನಂತೀರಿ?
ಶಿವರಾತ್ರಿ ಜಾಗರಣೆಯ ಈವೆಂಟ್ ಮ್ಯಾನೇಜರ್.

ಎನ್.ವಿ. ಶ್ರೀನಿವಾಸ್, ಮೈಸೂರು
ನಮ್ಮ ರೈಲ್ವೇಗೆ ಡೀಸೆಲ್, ವಿದ್ಯುತ್ ಎಂಜಿನ್ನುಗಳು ಎಂದೋ ಬಂದಿದ್ದರೂ ಇಂದೂ ರೈಲನ್ನು 'ಚುಕುಬುಕು' ಎನ್ನುವುದೇಕೆ?
ಚುರುಮುರಿ, ಕುರುಕಲು, ಬುರುಗಲು, ಕುಡಿಯುವಂಥವು ದೊರೆಯುತ್ತವೆಂದು ಸೂಚಿಸಲಂತೆ.

## ವಾರದ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು
ಜಗತ್ತು ಪ್ರಳಯವಾಗಿ ಎಲ್ಲರೂ ಸತ್ತರೆ ಸತ್ತವರಿಗೆ ತಿಥಿ ಮಾಡುವವರು ಯಾರು?
ಇವನ್ನೆಲ್ಲ ಗಮನಿಸಿರುವ ಕಾಗೆಗಳು ಮಾಡುತ್ತವಂತೆ. ಪಿಂಡವನ್ನು ಅನ್ಯಗ್ರಹದವರು ಸ್ವಿಗ್ಗಿಯಲ್ಲಿ ಕಳುಹಿಸುವರಂತೆ.

ತಲಕಾಡು ಶ್ರೀನಿಧಿ, ಬೆಂಗಳೂರು
ಇಲ್ಲೊಬ್ಬ ಹಿರಿಯರು ಮೌನೇನ ಕಲಹಂ 'ನಾಸ್ತಿ' ಎನ್ನುತ್ತಿದ್ದಾರೆ. ನೀವೇನಂತೀರಿ?
ಶರಣಾಗತಿಯ ಸಂಕೇತವಾಗಿ ಮೌನಿಯಾಗಿದ್ದರೆ 'ನಾಸ್ತಿ'; ಬೇಡಿಕೆ ಪೂರೈಸದೆ ಮೌನಿಯಾಗಿದ್ದರೆ 'ನ್ಯಾಸ್ತಿ'.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ಪಾರ್ಕಿಗೆ ಹೋದರೂ ಮೊಬೈಲ್ ಕಾಟ ತಪ್ಪಲಿಲ್ಲವಲ್ಲ ರಾಮ್‌ಜಿ?
ಪಾರ್ಕಿಂಗ್ ಲಾಟ್‌ಗೆ ಹೋಗಿ. ಬೇಸ್ಮೆಂಟಲ್ಲಿ ನೆಟ್ವರ್ಕ್ ಸೊಟ್ಟ.

ಬಾ.ರಂ. ಸುರೇಶ್, ಶಿವಮೊಗ್ಗ
ಕೂಡಿ ಬಾಳಿದರೆ ಸ್ವರ್ಗಸುಖ. ಕೂಡಿ ಬಾಳದಿದ್ದರೆ?



ವಿಚ್ಛೇದನ ವಕೀಲರಿಗೆ ಸ್ವರ್ಗಸುಖ.

ರವಿ ಎಂ. ಪೈ, ಹೊನ್ನಾವರ
ಅನ್ನದಾತರ ಮಕ್ಕಳು ಅನ್ಯ ಉದ್ಯೋಗ ಮಾಡುವುದೇಕೆ ಸಾರ್?
ಅನ್ನದಾತರ ಅನ್ನವನ್ನು ಭಾಗ್ಯದಾತರು ಕಸಿದುಕೊಂಡಿರುವುದರಿಂದ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಪುಣ್ಯವು ಕೇವಲ ಯಾತ್ರಾಕ್ಷೇತ್ರಗಳಲ್ಲಿ ಮಾತ್ರ ಇದೆಯೆ?
ಬೆಂಗಳೂರಲ್ಲೂ ಇದೆ. ಇಲ್ಲೊಬ್ಬರ ಮೊಮ್ಮಗುವಿನ ಹೆಸರು 'ಪುಣ್ಯ'.

■ ರಾಮ್